ಕಾರ್ಖಾನೆಗೆ ವರ್ಷವಿಡೀ ಕಬ್ಬನ್ನು ಸರಬರಾಜು ಮಾಡುವಂತಹ ಒಂದು ಯೋಜನೆಯನ್ನು ಏನಾದರೂ ನೀವು ಹಾಕಿಕೊಂಡಿದ್ದೀರಾ?

ಶ್ರೀ ಆರ್.ಬಿ. ಪೋತದಾರ್.— ಅದನ್ನು ಮಾಡುತ್ತೇವೆ. ಕೇನ್ ಡೆವಲಪ್‌ಮೆಂಟ್ ಫಂಡ್‌ನಿಂದ ದುಡ್ಡು ಬಂದ ಕೂಡಲೇ ಇದನ್ನು ಮಾಡುತ್ತೇನೆ.
ಬಂದ ಕೂಡಲೇ ಇದನ್ನು ಮಾಡುತ್ತೇವೆ.

ಶ್ರೀ ಜಿ. ಎಸ್. ಆಚಾರ್.— ಕೇಂದ್ರ ಸರ್ಕಾರಕ್ಕೆ ಬಂದಿದ್ದೇವೆ, ಅಲ್ಲಿಂದ ಫಂಡ್ ಬರುತ್ತದೆ ಎಂದು ಹೇಳುವುದಕ್ಕೆ ಬದಲು ಈ ಕಾರ್ಖಾನೆ ಬಗ್ಗೆ ತಮಗೆ ಕನಿಷ್ಟ ಕಾಳಜಿ ಆದರೂ ಇರಬೇಕಾಗಿತ್ತು. ಇದರ ಮೇಲೆ ಸರ್ಕಾರ ಈಗ ಹತ್ತು ಕೋಟಿ ರೂಪಾಯಿಗಳನ್ನು ತೊಡಗಿಸಿದೆ, ಇದನ್ನು ನಿಮಗೆ ನಡೆಸಲು ಸಾಧ್ಯವಾಗದಿದ್ದರೆ ಬೇರೆಯವರಿಗೆ ಮಾಡಿಬಿಡಿ. ಈಗ ಅಲ್ಲಿನ ಕಬ್ಬು ಬೆಳೆಗಾರರು ಕಬ್ಬು ಕೂಟ್ಟಿದ್ದಾರೆ. ಆದರೆ ಅವರಿಗೆ ದುಡ್ಡು ಕೊಟ್ಟಿಲ್ಲ. ಇದರ ಅಭಿವೃದ್ಧಿ ಬಗ್ಗೆ ಸರ್ಕಾರಕ್ಕೆ ನೂರಾರು ಸಲಹೆಗಳು ಬಂದಿವೆ. ಆದರೆ ಅವುಗಳ ಬಗ್ಗೆ ಸರ್ಕಾರ ಯಾವ ಚಿಂತನೆಯನ್ನು ಸಹ ಮಾಡಿಲ್ಲ. ಈಗ ಅಲ್ಲಿನ ಕಬ್ಬು ಬೆಳೆಗಾರರು ತಮ್ಮದೇ ಆದಂಥ ಸಂಘವನ್ನು ಮಾಡಿಕೊಂಡಿದ್ದಾರೆ. ಅವರು ತಮಗೆ ಯಾವ ರೀತಿಯ ಸಹಕಾರ ಬೇಕಾದರೂ ಕೊಡಲು ಸಿದ್ಧರಿದ್ದಾರೆ. ನೀವು ವರಾಹ ಪ್ರಾಜೆಕ್ಟ್ ಮಾಡುತ್ತೇವೆ ಎಂದು ಹೇಳಿತ್ತಿದ್ದೀರಿ. ಆದರೆ ಅದರ ಪ್ರಯೋಜನ ಈ ಕಬ್ಬು ಬೆಳೆಗಾರರಿಗೆ ಇನ್ನೂ ಸಿಕ್ಕಲ್ಲ. ಕಬ್ಬು ಬೆಳೆಗಾರರಿಗೆ ಬೇಕಾದ ನೀರಾವರಿ ಸೌಲಭ್ಯವನ್ನು ನೀವು ಒದಗಿಸುತ್ತಿಲ್ಲ. ಈ ಬಗ್ಗೆ ನೀವು ಏನು ಯೋಜನೆ ಮಾಡಿದ್ದೀರಿ? ಅಲ್ಲಿನ ಆಡಳಿತ ಮಂಡಳಿ ಸಭೆಯಲ್ಲಿ ಬರೀ ಅಧಿಕಾರಿಗಳೇ ಇದ್ದಾರೆ. ಅಲ್ಲಿಗೆ ಬೇರೆ ಬೇರೆ ಮಂತ್ರಿಗಳು ಬರುತ್ತಾರೆ. ಬೇರೆ ಬೇರೆ ಸಭೆಗಳು ನಡೆಯುತ್ತವೆ. ಆದರೆ ಇಪರ ಸಭೆ ಮಾತ್ರ ಕೋರಂ ಇಲ್ಲದ ಕಾರಣ ನಡೆಯುವುದೇ ಇಲ್ಲ. ಈ ಆಡಳಿತ ಮಂಡಳಿಗೆ ಸ್ಥಳೀಯ ಶಾಸಕರನ್ನು ಮತ್ತು ಕಬ್ಬು ಬೆಳೆಗಾರರ ಪ್ರತಿನಿಧಿಗಳನ್ನು ಹಾಕಿ ಎಂದರೆ ತಾವು ಕೇಳುವುದಿಲ್ಲ ಇದರ ಬಗ್ಗೆ ನೀವು ಏತಕ್ಕೆ ಚಿಂತನೆ ಮಾಡುವುದಿಲ್ಲ.

ಶ್ರೀಆರ್.ಬಿ. ಪೋತದಾರ್.— ಈಗ ಸಿಕ್ ಲಿಸ್ಟ್‌ನಲ್ಲಿರುವಂತಹ ಸಕ್ಕರೆ ಕಾರ್ಖಾನೆಗಳನ್ನು ಯಾವ ರೀತಿ ಲಾಭದಲ್ಲಿ ನಡೆಸಬೇಕೆಂಬುದನ್ನು ವಿಚಾರ ಮಾಡಲು ಒಂದು ಕ್ಯಾಬಿನೆಟ್ ಸಬ್-ಕಮಿಟಿಯನ್ನು ರಚಿಸಲಾಗಿದೆ. ಆ ಕಮಿಟಿ ಇಪ್ಪರವರೆಗೆ ಶೀರ್ಮಾನ ಕೈಕೊಳ್ಳಬೇಕಾಗಿತ್ತು. ಆದರೆ ಇನ್ನೂ ಆಲ್ಲಿ ಶೀರ್ಮಾನ ತೆಗೆದುಕೊಂಡಿಲ್ಲ. ಕೇನ್ ಡೆವಲಪ್‌ಮೆಂಟ್ ಫಂಡ್‌ನಿಂದ ಹಣ ಬಂದಕೂಡಲೇ ಕ್ರಮ ಕೈಕೊಳ್ಳುತ್ತೇವೆ. ಇದರ ಜೊತೆಗೆ ತಾವು ಹೇಳಿದ್ದನ್ನು ಸಹ ನಾನು ಗವರ್ನಮೆಂಟಲ್ಲಿಟ್ಟುಕೊಂಡು ಮಾಡುತ್ತೇನೆ.

ಕುಡುಮುಲ ರಂಗರಾವ್ ಟ್ರಸ್ಟ್ ಸಮಿತಿಯನ್ನು ಪುನರ್ ರಚಿಸುವ ಬಗ್ಗೆ.

೨೦೬೧. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ಕುಡುಮುಲ್ ರಂಗರಾವ್ ಟ್ರಸ್ಟ್ ಸಮಿತಿಯನ್ನು ಪುನರ್ ರಚಿಸುವ ಪ್ರಶ್ನೆಯನ್ನು ಸರ್ಕಾರ ಪರಿಗಣಿಸುವುದೆ ?

ಬಿ) ಈ ಟ್ರಸ್ಟನ್ನು ಪುನರ್–ರಚಿಸಲು ಟ್ರಸ್ಟೀಸ್ ಕಾಯ್ದೆ ಪ್ರಕಾರ ಸರ್ಕಾರಕ್ಕೆ ವಹಿಸಲಾಗಿದೆಯೆಂ?

ಸಿ) ಹಾಗಿದ್ದಲ್ಲಿ ಎಷ್ಟು ಕಾಲದಿಂದ ಬಾಕಿ ಇದೆ.

ಶ್ರೀ ಜಿ. ಬಸವಣ್ಣೆಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಎ) ಹೌದು.

ಬಿ) ದಕ್ಷಿಣ ಕನ್ನಡ ಜಿಲ್ಲೆಯ ಪರಿಶಿಷ್ಟ ಜಾತಿಯವರ ಸರ್ವತೋಮುಖ ಏಳಿಗೆಗಾಗಿ ಬಿಟ್ಟು ಕೊಟ್ಟಿರುವ ಚಿರ-ಚರ ಆಸ್ತಿಗಳು ಅತಿಕ್ರಮಣ ಮತ್ತು ದುರುಪಯೋಗಕ್ಕೆ ಒಳಪಟ್ಟಿರುವುದರಿಂದ ದಿವಂಗತರು ಸ್ಥಾಪಿಸಿದ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸರ್ಕಾರವು ದಿನಾಂಕ ೧೮-೩-೮೭ ರಂದು ಒಂದು ಉಚ್ಚ ಮಟ್ಟದ ಸಮಿತಿಯನ್ನು ರಚಿಸಿದೆ.

ಸಿ) "ಬಿ" ಭಾಗಕ್ಕೆ ಕೊಟ್ಟಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ —ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಬ್ಬ ಮಹಾದಾನಿ, ಆದಾತನನ್ನು ಮಹಾಪುರುಷ ಎಂದು ಹೇಳಬೇಕು ನನ್ನ ದೃಷ್ಟಿಯಲ್ಲಿ, ಅವರು ಬಡವರ ಕಲ್ಯಾಣಕ್ಕೋಸ್ಕರ ಹಿಂದೆ ಡಿಪ್ರೆಸ್ಡ್ ಕ್ಲಾಸ್ ಎಂದು ಇತ್ತು ಈಗ ದಲಿತರು ಎಂದು ಹೇಳಿಕೊಣ, ಇಂತಹ ದಲಿತರ ಕಲ್ಯಾಣಕ್ಕೋಸ್ಕರ ಸರ್ವ ಆಸ್ತಿಯನ್ನು ದಾನ ಮಾಡಿದ್ದಾರೆ. ಇವತ್ತು ಅವರು ಇಲ್ಲ. ಅವರು ಸಾಯುವುದಕ್ಕೆ ಮುಂಚಿತವಾಗಿ ಅಂದರೆ ರಾಜ್ಯಗಳ ಪುನರ್ವಿಂಗಡಣೆಯಾಗುತ್ತದಕ್ಕೆ ಮುಂಚಿತವಾಗಿ ಎಲ್ಲಾ ಆಸ್ತಿಯನ್ನು ಸರ್ಕಾರಕ್ಕೆ ಬರೆದುಕೊಟ್ಟಿದ್ದಾರೆ, ತಾವೇ ಮ್ಯಾನೇಜ್ ಮಾಡಿ ಎಂದು. ೧೯೫೬ನೇ ಇಸವಿಯಿಂದ ಈಗ ೧೯೮೮ನೇ ಇಸವಿವರೆಗೆ ಸರ್ಕಾರದ ವಶದಲ್ಲಿರತಕ್ಕಂಥ ಅವರ ಆಸ್ತಿಗಳನ್ನು ಸರಿಯಾಗಿ ನೋಡಿಕೊಳ್ಳಿತ್ತಾ ಇಲ್ಲ, ಮಾನ್ಯ ಮಂತ್ರಿಗಳು ಉತ್ತರದಲ್ಲಿ ಹೇಳಿಡಹಾಗೆ ಇದನ್ನು ಬಹಳ ಜನ ಕಬಳಿಸಿದ್ದಾರೆ, ಒತ್ತುವರಿ ಮಾಡಿದ್ದಾರೆ. ಹೀಗಿರುವಾಗ ನನ್ನ ಪ್ರಶ್ನೆ ಒಂದೇ ಒಂದು. ಈಗ ಸುಮಾರು ೨ ವರ್ಷಗಳಿಂದ ಸರ್ಕಾರದ ಮುಂದೆ ನಾನು ಬೇಡಿಕೆಯನ್ನು ಇಟ್ಟಿದ್ದೇನೆ. ಒಂದು ಟ್ರಸ್ಟ್ ಮಾಡಬೇಕು ಎಂದು ಒಂದು ಸ್ಕೀಂ ಕೊಟ್ಟಿದ್ದೇವೆ. ಆದರೆ ಇವರು ಸ್ಕೀಂ ಹೂಡಿಕೊಳ್ಳಲಿಕ್ಕೂ, ಟ್ರಸ್ಟ್ ಮಾಡಿಕೊಳ್ಳಲಿಕ್ಕೂ ವಿಳಂಬ ಮಾಡಿದ್ದಾರೆ. ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಿದ್ದೇವೆ ಎಂದು ಹೇಳಿದ್ದಾರೆ. ಈ ಸಮಿತಿ ಮಾಡಿದ್ದು ೧೯-೩-೧೯೮೭ರಲ್ಲಿ. ಆಸ್ತಿಗಳ ಪಟ್ಟಿ ಇದೆ. ಇವತ್ತಿನವರೆಗೂ ಚೀಫ್ ಸೆಕ್ರೆಟರಿ ಇದ್ದವರು ತೀರ್ಮಾನ ತೆಗೆದುಕೊಂಡಿಲ್ಲ. ನಾನು ಹಲವಾರು ಸಾರಿ ಮಂತ್ರಿಗಳಿಗೆ ಹೇಳಿದ್ದೇನೆ. ಚೀಫ್ ಸೆಕ್ರೆಟರಿಯವರು ತೀರ್ಮಾನ ತೆಗೆದುಕೊಳ್ಳದೇ ಹೋದರೆ ನೀವು ಏನಾದರೂ ಒಂದು ತೀರ್ಮಾನ ಮಾಡಿ, ಒಂದು ಟ್ರಸ್ಟ್ ಮಾಡಿ, ಅ ಟ್ರಸ್ಟ್‌ನವರು ವ್ಯವಹಾರ ಮಾಡುತ್ತಾರೆ ಎಂದು ಹೇಳಿದ್ದೇನೆ. ಅದಕ್ಕೂ ಜವಾಬು ಇಲ್ಲ, ಕಾಲಹರಣ ಮಾಡಿದ್ದಾರೆ, ಆದ್ದರಿಂದ ಯಾವಾಗ ತೀರ್ಮಾನ ತೆಗೆದುಕೊಳ್ಳಿತ್ತಾರೆ ಎನ್ನುವುದನ್ನು ದಯಮಾಡಿ ಹೇಳಬೇಕು. ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ತಾವು ನಿರ್ದಿಷ್ಟವಾಗಿ ಹೇಳಬೇಕು. ಇಂತಹ ಒಂದು ನಿರ್ಣಯ ತೆಗೆದುಕೊಳ್ಳುತ್ತೇನೆ ಎಂದು ದೃಢ ನಿರ್ಧಾರವನ್ನು ಹೇಳಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಜಿ. ಬಸವಣಪ್ಪ.—ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಹೇಳಿದಹಾಗೆ, ದಿವಂಗತ ಕುಡುಮಲ ರಂಗರಾಯರು ೧೯೯೬ನೇ ಇಸವಿಯಲ್ಲಿ ಡಿಪ್ರೆಸ್ಡ್ ಕ್ಲಾಸ್ ಎಂದೂ ಮಾಡಿ ಇವತ್ತಿನ ಬೆಲೆ ಮೂರುವರೆ ಕೋಟಿ, ಮೂರೂವರೆ ಕೋಟಿ ರೂಪಾಯಿ ಬೆಲೆ ಬಾಳತಕ್ಕ ಆಸ್ತಿಯೆಷ್ಟೂ ಆ ಸಂಸ್ಥೆಗೆ ಖಿಟ್ಟುಕೊಟ್ಟು ಹೋಗಿದ್ದಾರೆ. ಅಂದಿನ ಮದ್ರಾಸ್ ಸರ್ಕಾರ ಅದನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಚಾರಿಟಬಲ್ ಎಂಡೋಮೆಂಟ್ ಆಕ್ಟ್ ೧೯೬೦ ಪ್ರಕಾರ ಇದರ ಜವಾಬ್ದಾರಿಯನ್ನು ಪರಿಶಿಷ್ಟ ಜಾತಿಯ ನಿರ್ದೇಶಕರಿಗೆ ಹಚ್ಚಿದರು, ಆದಾದ ಮೇಲೆ ೧೯೫೬ನೇ ಇಸವಿಯಲ್ಲಿ ರಾಜ್ಯ ಪುನರ್ವಿಂಗಡಣೆಯಾತಿ, ಹಳೇ ಮೈಸೂರಿನ ವ್ಯಾಪ್ತಿಗೆ ದಕ್ಷಿಣ ಕನ್ನಡ ಜಿಲ್ಲೆ ಬಂದಾಗ ಜಿಲ್ಲಾಧಿಕಾರಿಗಳಾಗಿದ್ದಂಥ ಜಿ. ಮಂಜಯ್ಯನವರ ನೇತೃತ್ವದಲ್ಲಿ ಸಮಿತಿ ಮಾಡಿ ಈ ಆಸ್ತಿಯ ಜವಾಬ್ದಾರಿಯನ್ನು ಅವರಿಗೆ ಕೊಡಲಾಯಿತು. ನಾನು ಸಮಾಜ ಕಲ್ಯಾಣ ಮಂತ್ರಿಯಾದ ಮೇಲೆ, ಇಂತಹ ದೊಡ್ಡ ಆಸ್ತಿಯನ್ನು ಪರಿಶಿಷ್ಟಜಾತಿಯವರ ಕಲ್ಯಾಣಕ್ಕೋಸ್ಕರ ಕುಡುಮಲರಾಯರು ಬಿಟ್ಟು ಹೋಗಿದ್ದಾರೆ, ಹಿಂದೆ ಯಾರೂ ಇದರ ಬಗ್ಗೆ ಗಮನಹರಿಸಿಲ್ಲ, ನೀವು ಗಮನಕ್ಕೆ ತೆಗೆದುಕೊಳ್ಳಬೇಕು ಎಂದು ಮಾನ್ಯ ಸದಸ್ಯರು ಹೇಳಿದಾಗ, ನಾನು ಸಂಬಂಧಪಟ್ಟ ಫೈಲನ್ನು ತರಿಸಿ, ಸೌತ್ ಕೆನರಾ ಜಿಲ್ಲಾಧಿಕಾರಿಗಳನ್ನು ಕರೆಸಿ, ಕೋಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕ ಆಸ್ತಿ ಏನೇನಾಗಿದೆ ಎಂದು ತಿಳಿದುಕೊಳ್ಳುವುದಕ್ಕೆ ವ್ಯವಸ್ಥೆಪಟ್ಟೆ. ಈ ಆಸ್ತಿ ಎಸ್ಕ್ರೋಚ್‌ಮೆಂಟ್ ಆಗಿದೆ, ಹಲವಾರು ಜನಗಳ ಕೈಯಲ್ಲಿದೆ, ಇದನ್ನು ಯಾವ ರೀತಿ ನಾವು ವಶಕ್ಕೆ ತೆಗೆದುಕೊಳ್ಳಬೇಕು ಎಂದು ವಿಚಾರಮಾಡಿ, ಇದನ್ನು ಬೇರೆ ಯಾವ ಅಧಿಕಾರಿಗಳ ಜವಾಬ್ದಾರಿಗೆ ಕೊಟ್ಟರೆ ಕಷ್ಟ ಎಂದು ಹುಂಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಉನ್ನತಮಟ್ಟದ ಸಮಿತಿ ಮಾಡಿ, ಈ ಆಸ್ತಿಪಾಸ್ತಿಗಳಿ ಎಲ್ಲೆಲ್ಲಿದೆ ಅದನ್ನು ಈ ಟ್ರಸ್ಟ್ ಜವಾಬ್ದಾರಿಗೆ ತೆಗೆದುಕೊಂಡು ಆಮೇಲೆ ವಾಲಂಟರಿ ಆರ್ಗನೈಜೇಷನ್‌ಗೆ ಕೊಡುವ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳುವುದರ ಬಗ್ಗೆ ಮುಂಖ್ಯಮಂತ್ರಿಗಳ ಜೊತೆ, ಚರ್ಚೆ ಮಾಡಲಾಗುವುದು. ಈಗ ಮುಖ್ಯ ಕಾರ್ಯದರ್ಶಿಯವರು ಅಧ್ಯಕ್ಷರಾಗಿದ್ದಾರೆ, ಸಮಾಜ ಕಲ್ಯಾಣ ಕಾರ್ಯದರ್ಶಿಯವರು ಸದಸ್ಯರಾಗಿದಾ ರೆ, ಜಿಲ್ಲಾಧಿಕಾರಿಗಳು ಕಾರ್ಯದರ್ಶಿಗಳಾಗಿದ್ದಾರೆ. ಈ ರೀತಿಯ ಒಂದು ಸಮಿತಿ ಮಾಡಲಾಗಿದೆ. ಈಗಾಗಲೇ ಈ ಸಮಿತಿ

ಎರಡು ಸಾರಿ ಸಭೆ ಸೇರಿದೆ. ಅಲ್ಲಿರತಕ್ಕ ಆಸ್ತಿಪಾಸ್ತಿ ಬಗ್ಗೆ ಚರ್ಚೆ ಮಾಡಿದೆ. ಮೂರನೇ ಸಾರಿ ಮೀಟಿಂಗ್ ಸೇರಲಿದ್ದಾರೆ. ನಾನು ಮಾನ್ಯ ಹಿರಿಯ ಸದಸ್ಯರಾದ ಬಸವಲಿಂಗಪ್ಪನವರಿಗೆ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ, ಅವರು ಈ ವಿಷಯವನ್ನು ನನ್ನ ಗಮನಕ್ಕೆ ತರದೇ ಹೋಗಿದ್ದರೆ, ನಾನು ಆಸಕ್ತಿ ವಹಿಸಿ ಕೆಲಸ ಮಾಡುವುದಕ್ಕೆ ಆಗುತ್ತಿರಲಿಲ್ಲ. ಇದರ ಬಗ್ಗೆ ಆದಷ್ಟು ಬೇಗ ಕ್ರಮಾನ ತೆಗೆದುಕೊಳ್ಳುತ್ತೇನೆ. ಈ ಆಸ್ತಿಯನ್ನು ಒಂದು ಮಿಷನ್‌ಗೆ ವಹಿಸುವ ಬಗ್ಗೆ ಯೋಚನೆ ಮಾಡಲಾಗುವುದು. ಅದು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬೇಕು. ನೀವೇ ಅಧ್ಯಕ್ಷರಾಗಿ ಇರಿ. ನಾನು ಈ ವಿಚಾರದಲ್ಲಿ ಉದಾಸೀನ ಮಾಡಿಲ್ಲ. ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. I have taken prompt action, I have given priority. I have given weightage to your words...

ಶ್ರೀ ಕೆ. ಹೆಚ್; ಪಾಟೀಲ್. - ಪೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಪೆಡ್ಯೂಲ್ಡ್ ಟ್ರೈಬ್ಸ್ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಕೇಂದ್ರಸರ್ಕಾರದವರು ವಿದ್ಯಾರ್ಥಿನಿಲಯಗಳಿಗಾಗಿ ೯೦ ಪರ್ಸೆಂಟ್ ಗ್ರಾಂಟ್ ಕೊಡುತ್ತಾರೆ, ಈ ಮೂರು ಕೋಟಿ ರೂಪಾಯಿಗೆ ೩೦ ಕೋಟಿ ರೂಪಾಯಿ ತೆಗೆದುಕೊಂಡು, ಆ ಪುಣ್ಯವಂತರ ಹೆಸರಿನಲ್ಲಿ ಬಡ ಮಕ್ಕಳಿಗೆ ಅನುಕೂಲ ಮಾಡಿಕೊಡಿ.

ಶ್ರೀ ಜಿ. ಬಸವಣ್ಣೆಪ್ಪ.—ಅಲ್ಲಿರತಕ್ಕ ಆಸ್ತಿಪಾಸ್ತಿಗಳು ಪರರ ಪಾಲಾಗಿವೆ. ಇದರ ಬಗ್ಗೆ ಕ್ರಮ ಕೈಗೊಳ್ಳಲಾಗುವುದು,

ಶ್ರೀ ಬಿ. ಬಸವಲಿಂಗಪ್ಪ.—ನಿಮಗೆ ಆಸಕ್ತಿ ಇದೆ, ಜಾಗ್ರತೆಯಿಂದ ಕೊನೇ ನಿರ್ಧಾರ ಕೈಗೊಳ್ಳಬೇಕು. ನನ್ನ ಆತಂಕ ನೀವು ನಿರ್ಧಾರ ಕೈಗೊಂಡಿಲ್ಲ ಎಂದು ಹೇಳುವುದು. ಎಷ್ಟು ದಿವಸದೊಳಗೆ ಕೊನೇ ನಿರ್ಧಾರ ಕೈಗೊಳ್ಳುತ್ತೀರಿ? ಟ್ರಸ್ಟ್ ಆಕ್ಟ್ ಪ್ರಕಾರ ಅದರ ಆಡಿಯಲ್ಲಿ ಯಾವತ್ತು ರಿಜಿಸ್ಟರ್ಡ್ ಮಾಡಿಸುತ್ತೀರಿ ?

SRI G. BASAVANNAPPA.—The Chief Secretary is going to have a final meeting. He has asked the South Kanara D.C. to get certain particulrs. because all those particulars available with the Deputy Commissioner. ಆಸ್ತಿ ಪಾಸ್ತಿ ಇನ್ನೊಬರ ಕೈನಲ್ಲಿದೆ. ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಒಂದು ತಿಂಗಳು, ಎರಡು ತಿಂಗಳು ಅಥವಾ ಮೂರು ತಿಂಗಳೊಳಗೆ ಎಂದು ಹೇಳಿ.

ಶ್ರೀ ಜಿ. ಬಸವಣ್ಣೆಪ್ಪ.—ಇದರ ಜವಾಬ್ದಾರಿಯನ್ನು ಮುಖ್ಯ ಕಾರ್ಯದರ್ಶಿಗಳಿಗೆ ವಹಿಸಿಕೊಡಲಾಗಿದೆ. ಅವರೊಂದಿಗೆ ಚರ್ಚೆ ಮಾಡಿ, ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದು. I am equally interested.

SRI B. BASAVALINGAPPA.—I appreciate your interest but what I say since 1956 the whole matter was on statement and the then Government has not taken decision but because of my bringing the matter to the notice of Government this would not have seen the light. Therefore, I request the Hon'ble Minister when, within what time he is going to take a decision.

ಶ್ರೀ ಜಿ. ಬಸವಣ್ಣೆಪ್ಪ.—ಮಾನ್ಯ ಸದಸ್ಯರ ಭಾವನೆಯನ್ನು ತಿಳಿಸಿದ್ದಾರೆ. ಮುಖ್ಯ ಕಾರ್ಯದರ್ಶಿಗಳೊಡನೆ ಮಾತನಾಡಿ, ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಲಾಗುವುದು.